



ಕುಂದಾದ್ರಿ

# ಮಂಜು ಇಬ್ಬನಿಯ ಲಾಸ್ಯ

■ ಚಿತ್ರಲೇಖನ:
**ಪ್ರಕಾಶ ಜೆ.ಎಸ್.**

ಏಪ್ರಿಲ್ ತಿಂಗಳಲ್ಲಿ ನಮ್ಮ ನೆಚ್ಚಿನ 'ಸುಧಾ'ದಲ್ಲಿ 'ಕರ್ನಾಟಕದ ತಂಪು ತಾಣಗಳು' ಎಂಬ ಲೇಖನ ಪ್ರಕಟವಾಗಿತ್ತು. ಅದನ್ನು ಓದಿದ ಬಳಿಕ ಕುಂದಾದ್ರಿಯನ್ನು ನೋಡುವ ಬಯಕೆ ತಡೆಯಲಾಗಲೇ ಇಲ್ಲ. ಮೇ ಕೊನೆಯ ವಾರದಲ್ಲಿ ಕುಂದಾದ್ರಿಯ ಪ್ರವಾಸ ಕೈಗೊಂಡೆ. ಅಲ್ಲಿ ಒಬ್ಬ ಪ್ರಕೃತಿಪ್ರೇಮಿಯಾಗಿ ನನ್ನ ಅನುಭವ ಅನನ್ಯ. ಅನುಭವದ ಬುತ್ತಿಯನ್ನು ಈ ಛಾಯಾಚಿತ್ರಗಳ ಮೂಲಕ ಸುಧಾ ಓದುಗರಿಗೆ ಕಟ್ಟಿಕೊಡುವ ಪುಟ್ಟ ಪ್ರಯತ್ನವಿದು.

ನಾ ಹೋದದ್ದು ಬೆಳಗಿನ ಹೊತ್ತು. ಇದ್ದಷ್ಟೂ ಹೊತ್ತು, ಮಂಜು ಕರಗದೆ, ಮುಸುಕನ್ನು ಸರಿಸದೆ ಮುಂದಿನ ಮುಂಗಾರು ಮಳೆಗೆ ಕೂಡಿಸಿಟ್ಟಂತೆ ಕೂತ, ಚಲಿಸದ ಮೋಡಗಳು!

**(8ನೇ ಪುಟ ನೋಡಿ)**

